**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಓಎಸ್ 358/2021</u>**

ಪಿ ಡಬ್ಲ್ಯೂ-1

**<u>ದಿನಾಂಕ 13-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ ಕೆ ಎಸ್ ಡಿ ಪ್ರತಿವಾದಿ 3 ಮತ್ತು 4 ರ ಪರ ವಕೀಲರುಃ</u>**

ನಾನು ಸಲ್ಲಿಸಿರುವ ದಾವೆಯ ಬಗ್ಗೆ ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯನ್ನು ನಾನು ನಮ್ಮ ಮನೆಯಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು ನಮ್ಮ ಹೆಂಡತಿಯು ಸಹ ಆರೋಗ್ಯ ಸರಿಯಿಲ್ಲದ ಕಾರಣ ಪ್ರತಿದಿಯವರು ಹೊಗೆ ಮತ್ತು ಶಬ್ದವನ್ನುಂಟು ಮಾಡುತ್ತಿರುವುದರಿಂದ ಸಲ್ಲಿಸಿರುತ್ತೇನೆ. ನಾನು ನಮ್ಮ ತಾತನವರಿದ್ದ ಮನೆಯನ್ನು ನವೀಕರಣ ಮಾಡಿ ಸುಮಾರು 20 ವರ್ಷಗಳಿಂದ ಅಲ್ಲೇ ವಾಸ ಮಾಡುತ್ತಿದೇವೆ. ನಮ್ಮ ಮನೆಯು ಕೆ ಆರ್ ನಗರದ ಹುಣಸೂರು ರಸ್ತೆಯ ಎಡಭಾಗದಲ್ಲಿದೆ. ಸದರಿ ಮನೆಯು ಮುಖ್ಯ ರಸ್ತೆಯಿಂದ 15-20 ಅಡಿ ದೂರದಲ್ಲಿದೆ.

ಮಣ್ಣಿನ ರಸ್ತೆಯಲ್ಲಿ ಹೋದರೆ 10 ಅಡಿಯಲ್ಲಿ ನಮ್ಮ ಮನೆ ಬರುತ್ತದೆ. ಕೆ ಆರ್ ನಗರ ಮತ್ತು ಹುಣಸೂರು ರಸ್ತೆ ರಾಜ್ಯ ಹೆದ್ದಾರಿ ರಸ್ತೆ ಇದೆ. ಸಾಮಾನ್ಯವಾಗಿ ಸದರಿ ರಾಜ್ಯ ಹೆದ್ದಾರಿಯಿಂದ 80 ಅಡಿಯ ವರೆಗೆ ಯಾವುದೇ ಮನೆಯನ್ನು ನಿರ್ಮಾಣ ಮಾಡುವ ಹಾಗಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮ್ಮ ಮನೆಯನ್ನು ನಿರ್ಮಾಣ ಮಾಡಲು ಪರವಾನಿಗೆಯನ್ನುನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ನಮ್ಮ ತಾತನ ಕಾಲದಿಂದಲೂ ನಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ಖಾಲಿ ನಿವೇಶನ ಇದೆ ಎಂದರೆ ಸರಿ. ಸುಮಾರು 5-6 ವರ್ಷಗಳಿಂದ ಸದರಿ ಖಾಲಿ ನಿವೇಶನದಲ್ಲಿ ವರ್ಕ ಶಾಪ್ ಮಾಡುತ್ತಿರುತ್ತಾರೆ. ನಮಗೆ ಸದರಿ ಗ್ಯಾರೇಜ್ ಪ್ರಾರಂಭವಾಗಿ 5-6 ತಿಂಗಳ ನಂತರ ನಮಗೆ ತೊಂದರೆ ಯಾಗಿರುತ್ತದೆ. ಸದರಿ ಗ್ಯಾರೇಜ್ 2015-16 ನೇ ಇಸವಿಯಲ್ಲಿ ಪ್ರಾರಂಭವಾಗಿರುತ್ತದೆ ಎಂದರೆ ಇರಬಹುದು ಎಂದು ನುಡಿಯತ್ತಾರೆ

ನನಗೆ ತೊಂದರೆಯಾದಾಗ ನಾನು  ದೂರನ್ನು ಸಹ ದಾಖಲು ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಲಾಯಕ್ಕೆ ಹಾಜರು ಪಡಿಸಿರುತ್ತೇನೆ.  ನಾನು ದೂರನ್ನು ನೀಡಿದ ನಂತರ ತಾಲೂಕು ದಂಡಾಧಿಕಾರಿ, ಮುಖ್ಯಾಧಿಕಾರಿ ಮತ್ತು ಪೊಲೀಸ್ ಉಪ ನಿರೀಕ್ಷಕರು ತನಿಖೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.  ಸಾಕ್ಷಿ ಮುಂದುವರೆದು ನನ್ನ ಅರ್ಜಿಯನ್ನು ಮುನ್ಸಿಪಾಲಿಟಿಗೆ ನೀಡಿದ್ದು  ಮುನ್ಸಿಪಾಲಿಟಿಯವರು ಪ್ರತಿವಾದಿಯವರಿಗೆ 7 ದಿನಗಳೊಳಗೆ ಖಾಲಿ ಮಾಡುವಂತೆ ನೋಟಿಸ್ ನ್ನು ನೀಡಿರುತ್ತಾರೆ.  ಪ್ರತಿವಾದಿಗಳು 7 ದಿನಗಳ ನಂತರ ಖಾಲಿ ಮಾಡಿಲ್ಲ ಎಂದು ನಾನು ಪುನಃ ಮುನ್ಸಿಪಾಲಿಟಿಗೆ ತಿಳಿಸಿರುತ್ತೇನೆ.

ನನಗೆ ಯಾವ ದಿನಾಂಕದಲ್ಲಿ ಅರ್ಜಿಯನ್ನು ನೀಡಿರುತ್ತೇನೆ ಎಂದು ನೆನಪಿರುವುದಿಲ್ಲ. ನನಗೆ 2015-16 ರಲ್ಲಿ ಅರ್ಜಿ ನೀಡಿರುತೆತೇನೋ ಅಥವಾ 2019-20 ರಲ್ಲಿ  ಅರ್ಜಿ ನೀಡಿರುತ್ತೇನೋ ನನಗೆ ಗೊತ್ತಿರುವುದಿಲ್ಲ.  ನನಗೆ ಪಶ್ಚಿಮ ದಿಕ್ಕಿನಲ್ಲಿರುವ ಖಾಲಿ ನಿವೇಶನದ ಜಂಜರ್ ನಂಬರ್ ಗೊತ್ತಿರುವುದಿಲ್ಲ.  ನಮ್ಮ ದಾವೆಯಲ್ಲಿ ನಮ್ಮ ಮನೆ ಮತ್ತು ಖಾಲಿ ನಿವೇಶನದ ಚೆಕ್ ಬಂದಿಯನ್ನು ನಮೂದು ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು  ಬರುವುದಿಲ್ಲ.

ಸುಲ್ತಾನ ಮೊಹಲ್ಲಾ 310/17 ನಮ್ಮ ಮನೆಯಾಗಿರುತ್ತದೆ. ನಮ್ಮ ಮನೆಯ  ಯಾವ ದಿಕ್ಕಿನಲ್ಲಿ ಪ್ರತಿವಾದಿಯವರು  ಇದ್ದು ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ನಾನು ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ  ಸಾಕ್ಷಿ ನನಗೆ ಯಾವುದೇ ಜಂಜರ್ ನಂಬರ್ ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಕೆ ಆರ್ ನಗರ ಹುಣಸೂರು ರಾಜ್ಯ ಹೆದ್ದಾರಿಯಲ್ಲಿ ಪ್ರತಿದಿನ ಸಾವಿರಾರು  ವಾಹನಗಳು ಸಂಚಾರ ಮಾಡುತ್ತವೆ ಎಂದರೆ ಸರಿಯಲ್ಲ.  ಸಾಕ್ಷಿ ಮುಂದುವರೆದು  ಅದು ಯಾವುದೇ ಹೆದ್ದಾರಿಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ನಮ್ಮ ಮನೆಯ ಮುಂದೆ ಇರುವ ರಸ್ತೆಯ ಹುಣಸೂರು  ಕೆ ಆರ್ ನಗರ ರಸ್ತೆ  ಎಂದು ತಿಳಿದಿರುತ್ತದೆ ಅದರೆ ಸದರಿ  ರಸ್ತೆಯು ರಾಷ್ಟ್ರೀಯ ಅಥವಾ ರಾಜ್ಯ ಹೆದ್ದಾರಿಯೋ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆಯ  100 ಮೀಟರ್ ಅಂತರದಲ್ಲಿ  ಕೆ ಎಸ್  ಆರ್ ಟಿ ಸಿ ಘಟಕ  ಇದೆ ಎಂದರೆ  ಸಾಕ್ಷಿ ಅರ್ಧ ಕಿ ಮೀ ಅಂತರದಲ್ಲಿದೆ ಎಂದು ತಿಳಿಸಿರುತ್ತಾರೆ. ಕೆ ಆ್ ನಗರದ  ಗರುಡ ಗಂಭ ವೃತ್ತದಿಂದ  ವೃತ್ತದ ಪಕ್ಕದಲ್ಲಿ ಸರ್ಕಾರಿ ಪ್ರವಾಸಿ ಮಂದಿರವಿದೆ

ಎಂದರೆ ಸರಿ. ನಂತರ ಕಾಲೇನಹಳ್ಳಿ ರಸ್ತೆ ನಂತರ 10 ಮನೆಗಳು ಕಳೆದ ನಂತರ ನಮ್ಮ ಮನೆ ಬರುತ್ತದೆ ಎಂದು ತಿಳಿಸಿರುತ್ತಾರೆ. ನಮ್ಮ ಮನೆಯಿಂದ 10 ಮನೆಗಳ ತರುವಾಯ ಸುಭಾಷ ನಗರದ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆಯಿದ ½ ಕಿ ಮೀ ದೂರದಲ್ಲಿ ಸುಭಾಷ ನಗರ ಇದೆ ಎಂದು ತಿಳಿಸಿರುತ್ತಾರೆ.

ನಂತರ ಸುಭಾಷ ನಗರದ ರಸ್ತೆ ತರುವಾಯ ನಾಮದಾರಿಗೌಡ ಕಲ್ಯಾಣ ಮಂಟಪ ಅದಕ್ಕೆ ಹೊಂದಿಕೊಂಡಂತೆ ಉಪ ಕಾರಾಗೃಹ ಇದೆ ಎಂದರೆ ಸಾಕ್ಷಿ ½ ಕಿ ಮೀ ದೂರದಲ್ಲಿದೆ ಎಂದು ತಿಳಿಸಿರುತ್ತಾರೆ. ಕೆ ಎಸ್ ಆರ್ ಟಿ ಸಿ ಘಟಕವು ಉಪ ಕಾರಾಗೃಹದ ನಂತರ ಅಥವಾ ಮೊದಲೇ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಮೊದಲು ಕೆ ಎಸ್ ಆರ್ ಟಿ ಸಿ ಘಟಕ ಬರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಕೆ ಎಸ್ ಆರ್ ಟಿ ಸಿ ಘಟಕವು ಕೆ ಆರ್ ನಗರದ ಎಲ್ಲಾ ಬಸ್ಸಗಳು ಬರುತ್ತವೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಇನ್ನೂ ಒಂದು ಕಿ ಮೀ ದೂರ ಹೋಗಬೇಕು ಎಂದು ತಿಳಿಸಿರುತ್ತಾರೆ. ರಸ್ತೆಯ ಅಂರದಲ್ಲಿ 1 ಕಿ ಮೀ ಅಂತರದಲ್ಲಿ ಕೆ ಎಸ್ ಆರ್ ಟಸಿ ಘಟಕ ಇದೆ ಎಂದು ಬರೆಸಿಕೊಂಡು ಬರಲು ಆಗುವುದಿಲ್ಲ. ರಸ್ತೆಗೆ ಹೊಂದಿಕೊಂಡಂತೆ ಕೆ ಎಸ್ ಆರ್ ಟಿ ಸಿ ಘಟಕ ಇದೆ ಎಂದರೆ ಸರಿಯಲ್ಲ.

ಪ್ರವಾಸಿ ಮಂದಿರದ ಪಕ್ಕದಲ್ಲಿ ಕಾಳೇನಲ್ಲಿ ಗೆ ಹೋಗುವ ರಸ್ತೆಯ ಮೂಲೆಯಲ್ಲಿ ದುರ್ಗಾ ಸ್ವಿಟ್ಸ ರವರ ಮನೆ ಇದೆ ಎಂದರೆ ಸರಿ. ಸದರಿ ಮನೆ ನಿರ್ಮಾಣವಾಗಿ ಎಷ್ಟು ವರ್ಷಾಗಳಾಗಿವೆ ನನಗೆ ಗೊತ್ತಿರುವುದಿಲ್ಲ. ನಮ್ಮಅಕ್ಕಪಕ್ಕದಲ್ಲಿರುವ ಮನೆಗಳು ಸಹ ಯಾವಾಗ ನಿರ್ಮಾಣ ವಾಗಿವೆ ಎಂದು ನನಗೆ ಗೊತ್ತಿರುವುದಿಲ್ಲ. ದುರ್ಗಾ ಸ್ವಿಟ್ಸ ರವರ ಮನೆಯ 10 ಮನೆಗಳ ನಂತರ ನಮ್ಮ ಮನೆ ಬರುತ್ತದೆ.

ಸದರಿ ಎಲ್ಲಾ ಮನೆಗಳಲ್ಲಿಯೂ ಸಹ ಮುಂದುಗಡೆ ವ್ಯವಹಾರವನ್ನು ಮಾಡಲು ಅಂಗಡಿ ಮಳಿಗೆಗಳನ್ನು ಮಾಡಿಕೊಂಡು ಸದರಿ ಮಳಿಗೆಗಳ ಹಿಂದಗಡೆ ವಾಸವಾರಿದ್ದಾರೆ ಎಂದರೆ ಸರಿಯಲ್ಲ. ಎಲ್ಲರೂ ಸಹ ಮನೆಗಳಲ್ಲಿಯೇ ವಾಸವಾಗಿದ್ದು ಯಾರ ಮನೆಯ ಮುಂದಯೂ ಸಹ ಮಳಿಗೆಗಳು ಇರುವುದಿಲ್ಲ. ಪ್ರತಿವಾದಿಗಳು ನಡೆಸುತ್ತಿರುವ ಗ್ಯಾರೇಜ್ ನ ನೀವೇಶನ ಮೂಲತಃ ಭೆರ್ಯ ದ ಸಾಧಿಕ್ ರವರಿಗೆ ಸೇರಿದ್ದು ಅದು ಯಾರ ಹೆಸರಿನಲ್ಲಿದೆ ಎಂದು ನನಗೆ

ಗೊತ್ತಿರುವುದಿಲ್ಲ. ನಾನು ದೂರನ್ನು ನಿವೇಶನದ ಮಾಲೀಕರು ಮೇಲೆ ನೀಡಿದ್ದೇನೆ. ನಾವು ನೀಡಿರುವ ದೂರಿನ ಪ್ರತಿಗಳನ್ನು ನ್ಯಾಯಲಾಯಕ್ಕೆ ಹಾಜರು ಪಡಿಸಿದ್ದೇನೆ. ನಮ್ಮತಾಯಿಯು 3 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ದಿಃ 26-05-2020 ರಲ್ಲಿ ನಮ್ಮ ತಾಯಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಮ್ಮ ತಾಯಿ ಯವರು ಕೊವಿಡ್ -19 ಕಾಯಿಲೆಯಿಂದ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲಚಿ, ನಮ್ಮ ತಾಯಿಗೆ ಕೊವಿಡ್ ಇತ್ತು ಎಂದು ಚಿಕಿತ್ಸೆಯನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮೃತಪಟ್ಟಾಗ ಅವರಿಗೆ 65 ವರ್ಷ ವಯಸ್ಸಾಗಿತ್ತು.

ನಮ್ಮತಾಯಿಯವರು ಹೊಗೆ, ಟಿಂಕರಿಂಗ್ ಶಬ್ದ, ಪೆಂಟಿಂಗ್ ವಾಸನೆ, ವಿದ್ಯುತ್ ವೈರ್ ಸುಡುವ ವಾಸನೆಯಿಂದ ನಮ್ಮ ತಾಯಿಯ ಆರೋಗ್ಯ ಕೆಟ್ಟಿರುತ್ತದೆ. ನಾನು ನಮ್ಮ ತಾಯಿಯನ್ನು ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆ ಮತ್ತು ಸಿದ್ದು ವೈದ್ಯರು ನಂತರ ಕೆ ಆರ್ ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ. ನಮ್ಮ ತಾಯಿಯವರಿಗೆ ಮೇಲೆ ಹೇಳಿದ ಹೊಗೆ, ಟಿಂಕರಿಂಗ್ ಶಬ್ದ, ಪೆಂಟಿಂಗ್ ವಾಸನೆ, ವಿದ್ಯುತ್ ವೈರ್ ಸುಡುವ ವಾಸನೆಯಿಂದ ಆರೋಗ್ಯ ಕೆಟ್ಟಿರುತ್ತದೆ ಎಂದು ಯಾವುದೇ ವರದಿಯನ್ನು ನೀಡಿರುವುದಿಲ್ಲ ಅದರೆ ಮೌಖಿಕವಾಗಿ ವೈದ್ಯರು ತಿಳಿಸಿರುತ್ತಾರೆ.

ನಾವು ನಮ್ಮ ತಾಯಿಯವರನ್ನು ಹಲವಾರು ಬಾರಿ 1-2 ದಿನಗಳ ಕಾಲ ಆಸ್ಪತ್ರೆಗೇ ಸೇರಿಸಿ ಚಿಕಿತ್ಸೆಯನ್ನು ಕೊಡಿಸಿರುತ್ತೇವೆ. 2018-19 ನೇ ಇಸವಿಯಿಂದ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ. ನಾನು ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೆನೋಇಲ್ಲಮೋ ನೊಡೇಬೇಕು ಎಂದು ತಿಳಿಸಿರುತ್ತಾರೆ. ನಮ್ಮ ತಾಯಿ ಮನೆಯಲ್ಲಿ ಮೃತ ಪಟ್ಟಿರುತ್ತಾರೆ.

ನಮ್ಮ ತಾಯಿ 65-70 ವರ್ಷ ವಯಸ್ಸಾಗಿದ್ದ ಕಾರಣ ವಯೋಸಹಜ ಕಾಯಿಲೆಯಿಂದ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. 2019-20 ನೇ ಇಸವಿಯಲ್ಲಿ ಕೊವಿಡ್-19 ಕಾಯಿಲೆಯಿಂದ ಮೃತ ಪಟ್ಟಿರುತ್ತಾರೆ ಎಂದರ ಸರಿಯಲ್ಲ. ಹಾಗಾಗಿ ಚಿಕಿತ್ಸೆ ಕೊಡಿಸದೇ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ  ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ